## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ** 747/2022

| | | |
|---|---|---|
| ಸಾಕ್ಷಿದಾರರ ಹೆಸರು | ರಾಜೇಂದ್ರ ಎಸ್ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 14.08.2026 |
| ತಂದೆಯ ಹೆಸರು/ ಗಂಡನ ಹೆಸರು | ಲಕ್ಷ್ಮಣ | |
| ವಯಸ್ಸು | 30 ವರ್ಷ | |
| ಉದ್ಯೋಗ | Beat Forester | ಚಾಸಾಃ 2<br>ಫ್ರಾಸಾಃ 2 |
| ವಾಸ | ಪುಣಚನೂರು, ವನ್ಯ ಜೀವಿ ವಲಯ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ (EVIDENCE BEFORE CHARGE)**

ನಾನು 2019 ರಿಂದ 2025 ರವರೆಗೆ ಮದ್ದೂರು, ಉಪ ವಲಯದಲ್ಲಿ, Beat Forester ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.12.2023 ರಂದು ಚಾಸಾ-1 ರವರು ಕಛೇರಿಯಲ್ಲಿ ಇದ್ದಾಗ ನಮಗೆ ಮದ್ದೂರು ಚೆಕ್ ಪೋಸ್ಟ್ ನಿಂದ ಮದ್ದೂರು ವಲಯದ ಐರನ್ ಬ್ರಿಡ್ಜ ಗಸ್ತು, ಸಿ ಪಿ ನಂ. 25 ರ ಕೊಂಡೈನ ತೀರುವ ಅರಣ್ಯದ ರಾ. ಹೆ-766 ರಲ್ಲಿ ಅಶೋಕ್ ಲೈ-ಲ್ಯಾಡ್ ಲಾರಿ ನಂ. ಟಿ ಎನ-99-ಸಿ-7677ರಲ್ಲಿ ಒಂದು ಕಾಡು ಆನೆಗೆ ಅಪಘಾತಪಡಿಸಿರುತ್ತದೆ ಎಂದು ಮಾಹಿತಿ ಬಂತು. ಆಗ ಚಾಸಾ-1, ನಾನು ಮತ್ತು ಚಾಸಾ-3 ರವರು ನಮ್ಮ ಕಛೇರಿ ಜೀಪ್ ನಂ. ಕೆ.ಎ-10-ಜಿ-336 ರಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ಒಂದು ಹೆಣ್ಣಾನೆ ರಸ್ತೆಯ ಎಡಭಾಗದಲ್ಲಿ ಸತ್ತು ಬಿದ್ದಿರುವುದು ಕಂಡು ಬಂತು. ಅದನ್ನು ಪರಿಶೀಲಿಸಿದಾಗ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು , ರಕ್ತಸ್ರಾವ ಆಗಿದ್ದು, ಅದರ ಕಾಲು ಮತ್ತು ಬೆನ್ನಿಗೆ ತೀವ್ರವಾಗಿ ಉಜ್ಜಿದ ಗಾಯವಾಗಿದ್ದು ಕಂಡು ಬಂತು. ನಂತರ ಅದರ ಮುಂದೆ ಒಂದು ಕೆಪ್ಪು ಬಣ್ಣದ ಸದರಿ ಲಾರಿಯು ನಿಂತಿದ್ದು ಅದರ ಒಳಗಡೆ ಇದ್ದ ಇಬ್ಬರು ವ್ಯಕ್ತಿ ಇದ್ದರು, ಅವರನ್ನು ವಿಚಾರಿಸಿದಾಗ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಅಯ್ಯಸ್ವಾಮಿ ಹಾಗೂ ಇನ್ನೊಬ್ಬ ಆನಂತ ಕುಮಾರ್ ಎಸ್ ಬಿನ್ ಸುಬ್ಬಮಣ್ಣ, ಲಾರಿಯರ ಕ್ಲಿನರ್ ಆಗಿದ್ದು ಇಬ್ಬರು ಮದುಕರೆ ತಾಲ್ಲೂಕು, ಕೊಯಂಬತ್ತೂರು ಜಿಲ್ಲೆ, ತಮಿಳು ನಾಡು ರಾಜ್ಯದವರು ಆಗಿದ್ದು, ತಾವು ಲಾರಿಯನ್ನು ಕೇರಳ ರಾಜ್ಯದಿಂದ ಕರ್ನಾಟಕ ರಾಜ್ಯದ ನಂಜನಗೂಡಿಗೆ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಸದರಿ ಸ್ಥಳದಲ್ಲಿ ಕಾಡಾನೆ ರಸ್ತೆ ದಾಟುತ್ತಿದ್ದಾಗ ತನ್ನ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿರುವುದಾಗಿ ತಿಳಿಸಿದರು. ಸ್ಥಳವನ್ನು ಪರಿಶೀಲಿಸಿದಾಗ ರಸ್ತೆಯಲ್ಲಿ ಟೈರ್ ತೀವ್ರವಾಗಿ ರಸ್ತೆಗೆ ಉಜ್ಜಿದ ಗುರುತುಗಳು ಕಂಡು ಬಂತು. ಲಾರಿಯು ವೇಗವಾಗಿ ಚಲಾಯಿಸಿ ಆನೆಗೆ ಡಿಕ್ಕಿ ಹೊಡೆದಿರುವುದರಿಂದ ಲಾರಿಯ

ಎಡಭಾಗದ ವಿಂಡ್ ಗ್ಲಾಸ್ ಒಡೆದು ಚೂರಾಗಿತ್ತು, ಬಂಪರ್ ಕೂಡ ಬೆಂಡಾಗಿತ್ತು. ಸದರಿ ರಸ್ತೆಯಲ್ಲಿ ಸೂಚನಾ ಫಲಕವನ್ನು ಸಹ ಹಾಕಲಾಗಿತ್ತು. ಲಾರಿ ಚಾಲಕ ಲಾರಿಯನ್ನು ವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಸದರಿ ಆನೆಗೆ ಡಿಕ್ಕಿಪಡಿಸಿದ್ದರಿಂದ ಆನೆ ಮೃತಪಟ್ಟಿರುತ್ತದೆ. ನಂತರ ಪಂಚರಾದ ಚಾಸಾ–4 ಮಲ್ಲೇಶ್ ರವರನ್ನು ಕರೆಯಿಸಿ ಅವರ ಸಮಕ್ಷಮ ರಾತ್ರಿ 8.00 ರಿಂದ 9.00 ರವರೆಗೆ ಸ್ಥಳ ಮಹಜರ್ ಮಾಡಿ ನಂತರ ಮೃತ ಆನೆಯನ್ನು ಹಾಗೂ ವಾಹನವನ್ನು ಆರೋಪಿತರನ್ನು ಕಛೇರಿಗೆ ತಂದೆವು. ನಂತರ ವಲಯ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿ ದೂರನ್ನು ನೀಡಿರುತ್ತೇನೆ.ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ದಿಃ 14.12.2022 ರಂದು ಮದ್ದೂರು ಶಾಖೆಯ ಅರಣ್ಯ ಪ್ರದೇಶದಲ್ಲಿ ಹಾಲೆಗೌಡನ ಕಟ್ಟೆ ಗಸ್ತು, ಹೊಸಕೆರೆ ಅರಣ್ಯ ಪ್ರದೇಶದಲ್ಲಿ ಮೃತ ಆನೆಯ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ ಕಳೆ ಬರಹವನ್ನು ಪ್ರಕೃತಿ ಬಿಡಲಾಯಿತು ಹಾಗೂ ಬೆ. 8.30 ರಿಂದ 10.00 ರವರೆಗೆ ಮಹಜರ್ ಮಾಡಲಾಯಿತು. ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು, ವಾಹನ ಹಾಗೂ ಮೃತ ಆನೆಯ ಭಾವ ಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ.

ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 747/2022**

| | | |
|---|---|---|
| ಸಾಕ್ಷಿದಾರರ ಹೆಸರು | ರವಿ ಕುಮಾರ ಸಂಗೂರು | ಪ್ರಮಾಣ ವಚನ ಬೋಧಿಸಿದ ದಿನಾಂಕಃ 14.08.2026 |
| ತಂದೆಯ ಹೆಸರು/ ಗಂಡನ ಹೆಸರು | ಏಕನಾಥ | |
| ವಯಸ್ಸು | 39 ವರ್ಷ | |
| ಉದ್ಯೋಗ | ಉಪ ವಲಯ ಅರಣ್ಯಾಧಿಕಾರಿ | ಚಾಸಾಃ 1<br>ಫ್ರಾಸಾಃ 1 |
| ವಾಸ | ಮದ್ದೂರು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ (EVIDENCE BEFORE CHARGE)**

ನಾನು 2022 ರಿಂದ ಇಲ್ಲಿಯವರೆಗೆ ಮದ್ದೂರು, ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 13.12.2023 ರಂದು ನಾನು ಕಛೇರಿಯಲ್ಲಿ ಇದ್ದಾಗ ನಮಗೆ ಮದ್ದೂರು ಚೆಕ್ ಪೋಸ್ಟ್ ನಿಂದ ಮದ್ದೂರು ವಲಯದ ಐರನ್ ಬ್ರಿಡ್ಜ ಗಸ್ತು, ಸಿ ಪಿ ನಂ. 25 ರ ಕೊಂಡೈನ ತೀರುವ ಅರಣ್ಯದ ರಾ. ಹೆ-766 ರಲ್ಲಿ ಅಶೋಕ್ ಲೈ-ಲ್ಯಾಡ್ ಲಾರಿ ನಂ. ಟಿ ಎನ-99-ಸಿ-7677ರಲ್ಲಿ ಒಂದು ಕಾಡು ಆನೆಗೆ ಅಪಘಾತಪಡಿಸಿರುತ್ತದೆ ಎಂದು ಮಾಹಿತಿ ಬಂತು. ಆಗ ನಾನು ಮತ್ತು ಚಾಸಾ-2 ಮತ್ತು 3 ರವರು ನಮ್ಮ ಕಛೇರಿ ಜೆಪ್ ನಂ. ಕೆ.ಎ-10-ಜಿ-336 ರಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ಒಂದು ಹೆಣ್ಣಾನೆ ರಸ್ತೆಯ ಎಡಭಾಗದಲ್ಲಿ ಸತ್ತು ಬಿದ್ದಿರುವುದು ಕಂಡು ಬಂತು. ಅದನ್ನು ಪರಿಶೀಲಿಸಿದಾಗ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ರಕ್ತಸ್ರಾವ ಆಗಿದ್ದು, ಅದರ ಕಾಲು ಮತ್ತು ಬೆನ್ನಿಗೆ ತೀವ್ರವಾಗಿ ಉಜ್ಜಿದ ಗಾಯವಾಗಿದ್ದು ಕಂಡು ಬಂತು. ನಂತರ ಅದರ ಮುಂದೆ ಒಂದು ಕೆಪ್ಪು ಬಣ್ಣದ ಸದರಿ ಲಾರಿಯು ನಿಂತಿದ್ದು ಅದರ ಒಳಗಡೆ ಇದ್ದ ಇಬ್ಬರು ವ್ಯಕ್ತಿ ಇದ್ದರು, ಅವರನ್ನು ವಿಚಾರಿಸಿದಾಗ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಅಯ್ಯಸ್ವಾಮಿ ಹಾಗೂ ಇನ್ನೊಬ್ಬ ಆನಂತ ಕುಮಾರ್ ಎಸ್ ಬಿನ್ ಸುಬ್ಬಮಣ್ಯ, ಲಾರಿಯರ ಕ್ಲಿನರ್ ಆಗಿದ್ದು ಇಬ್ಬರು ಮದುಕರೆ ತಾಲ್ಲೂಕು, ಕೊಯಂಬತ್ತೂರು ಜಿಲ್ಲೆ, ತಮಿಳು ನಾಡು ರಾಜ್ಯದವರು ಆಗಿದ್ದು, ತಾವು ಲಾರಿಯನ್ನು ಕೇರಳ ರಾಜ್ಯದಿಂದ ಕರ್ನಾಟಕ ರಾಜ್ಯದ ನಂಜನಗೂಡಿಗೆ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಸದರಿ ಸ್ಥಳದಲ್ಲಿ ಕಾಡಾನೆ ರಸ್ತೆ ದಾಟುತ್ತಿದ್ದಾಗ ತನ್ನ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿರುವುದಾಗಿ ತಿಳಿಸಿದರು. ಸ್ಥಳವನ್ನು ಪರಿಶೀಲಿಸಿದಾಗ ರಸ್ತೆಯಲ್ಲಿ ಟೈರ್ ತೀವ್ರವಾಗಿ ರಸ್ತೆಗೆ ಉಜ್ಜಿದ ಗುರುತುಗಳು ಕಂಡು ಬಂತು. ಲಾರಿಯು ವೇಗವಾಗಿ ಚಲಾಯಿಸಿ ಆನೆಗೆ ಡಿಕ್ಕಿ ಹೊಡೆದಿರುವುದರಿಂದ ಲಾರಿಯ ಎಡಭಾಗದ ವಿಂಡ್ ಗ್ಲಾಸ್ ಒಡೆದು ಚೂರಾಗಿತ್ತು, ಬಂಪರ್ ಕೂಡ ಬೆಂಡಾಗಿತ್ತು. ಸದರಿ ರಸ್ತೆಯಲ್ಲಿ ಸೂಚನಾ ಫಲಕವನ್ನು ಸಹ ಹಾಕಲಾಗಿತ್ತು. ಲಾರಿ ಚಾಲಕ ಲಾರಿಯನ್ನು

ವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಸದರಿ ಆನೆಗೆ ಡಿಕ್ಕಿಪಡಿಸಿದ್ದರಿಂದ ಆನೆ ಮೃತಪಟ್ಟಿರುತ್ತದೆ. ನಂತರ ಪಂಚರಾದ ಚಾಸಾ–4 ಮಲ್ಲೇಶ್ ರವರನ್ನು ಕರೆಯಿಸಿ ಅವರ ಸಮಕ್ಷಮ ರಾತ್ರಿ 8.00 ರಿಂದ 9.00 ರವರೆಗೆ ಸ್ಥಳ ಮಹಜರ್ ಮಾಡಿ ನಂತರ ಮೃತ ಆನೆಯನ್ನು ಹಾಗೂ ವಾಹನವನ್ನು ಆರೋಪಿತರನ್ನು ಕಛೇರಿಗೆ ತಂದೆವು. ನಂತರ ವಲಯ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿ ದೂರನ್ನು ನೀಡಿರುತ್ತೇನೆ.ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ದಿಃ 14.12.2022 ರಂದು ಮದ್ದೂರು ಶಾಖೆಯ ಅರಣ್ಯ ಪ್ರದೇಶದಲ್ಲಿ ಹಾಲೆಗೌಡನ ಕಟ್ಟೆ ಗಸ್ತು, ಹೊಸಕೆರೆ ಅರಣ್ಯ ಪ್ರದೇಶದಲ್ಲಿ ಮೃತ ಆನೆಯ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ ಕಳೆ ಬರಹವನ್ನು ಪ್ರಕೃತಿ ಬಿಡಲಾಯಿತು ಹಾಗೂ ಬೆ. 8.30 ರಿಂದ 10.00 ರವರೆಗೆ ಮಹಜರ್ ಮಾಡಲಾಯಿತು. ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು, ವಾಹನ ಹಾಗೂ ಮೃತ ಆನೆಯ ಭಾವ ಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ.

ದೂರನ್ನು ನಿಪಿ–1 ಎಂದು ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಸ್ಥಳ ಮಹಜರ್ ನ್ನು ನಿಪಿ–2 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ದಿಃ 14.12.2022 ರ ಮಹಜರ್ ನ್ನು ನಿಪಿ–3 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಹತ್ತು ಭಾವಚಿತ್ರಗಳನ್ನು ನಿಪಿ–4 ರಿಂದ 13 ಎಂದು ಮತ್ತು ಸಿಡಿಯನ್ನು ನಿಪಿ–14 ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ

ಗುಂಡ್ಲುಪೇಟೆ.